ದಿ:**07.08.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು**.**

ಮುಂದುವರೆದ ಪಾಟೀ ಸವಾಲು:- ಆರೋಪಿ ಪರ G.H.S., ವಕೀಲರಿಂದ:-

ನಿಡಿ 1 ಹೇಳಿಕೆಯಲ್ಲಿ ಇರುವ ಮಾಹಿತಿ ಬಗ್ಗೆ ನನಗೆ ತಿಳಿದಿರುತ್ತದೆ . ಸದರಿ ಹೇಳಿಕೆಯನ್ನು ಜಗಳೂರ ಪೋಲಿಸ್ ಠಾಣೆಯಲ್ಲಿ ನೀಡಿರುತ್ತೇನೆ . ಆ ದಿನ ನಾನು ಒಬ್ಬನೇ ನೀಡಿರುತ್ತೇನೆ . ನನ್ನ ಜೊತೆ ಯರು ಇರುವುದಿಲ್ಲ . ಈಗ ನ್ಯಾಯಾಲಯಲದಲ್ಲಿ ಹಾಜರಿರುವ ಸಿ.ಸಿ. 59/2022 ರ ಪಿರ್ಯಾದುದಾರರು

ನಿಂತಿದ್ದು ಅವರನ್ನು ಸಾಕ್ಷೀಗೆ ತೋರಿಸಿ ಯಾರು ಎಂದು ಕೇಳಿದಾಗ ಸಾಕ್ಷಿ ಅವರು ಹೆಸರು ಮಂಜುನಾಥ ತಂದೆ ವೆಂಕಟರಮಾಣಚಾರಿ ಅವರು ಬಂಗಾರದ ಅಂಗಡಿ ವ್ಯಾಪರ ಇರುತ್ತದೆ . ಅವರು ತನಗೆ ಸುಮಾರು 10 ವರ್ಷದಿಂದ ಪರಿಚಯ ಇರುತ್ತದೆ ಎಂದು ಹೇಳುತ್ತಾರೆ . ನನಗೆ ಮಂಜುನಾಥ ಅವರು ಇದೇ ನಾಯಾಲಯದಲ್ಲಿ ನೀಡಿದ ಸಾಕ್ಷಿಯನ್ನು ಸ್ವಲ್ಪ ಮಟ್ಟಿಗೆ ಕೇಳಿಸಿಕೊಂಡಿರುತ್ತೇನೆ . ನನಗೆ ಸದರಿ ಮಂಜುನಾಥ ಅವರು ಇದೇ ಆರೋಪಿ ವಿರುದ್ದ ಎಷ್ಟು ಹಣಕ್ಕೆ ಚೆಕ್ ಅಮಾನತು ಪ್ರಕರಣ ಸಲ್ಲಿಸಿದ್ದಾರೆಂದು ನನಗೆ ಗೊತ್ತಿಲ್ಲ. ಆರೋಪಿಯು ನನ್ನಿಂದ ಹಣವನ್ನು ತನ್ನ ವ್ಯವಹಾರದ ಉದ್ದೇಶದಿಂದ ಕೇಳಿರುತ್ತಾರೆ. ಆರೋಪಿಯ ತಂದೆ ನನಗೆ ಗೋತ್ತು ಅವರು ಯಾವ ಕೆಲಸ ಮಾಡುತ್ತಾರೆ ನನಗೆ ಗೊತ್ತಿಲ್ಲ . ಆರೋಪಿ ಪೂರ್ತಿ ಹೆಸರು ಭರತ್ ಕುಮಾರ್ ಅವರು ತಂದೆ ಹೆಸರು ಹಾಲಪ್ಪ ಇರುತ್ತದೆ . ನನ್ನ ದೂರಿನಲ್ಲಿ ಸದರಿ ಹೆಸರನ್ನು ನೀಡಿರುತ್ತೇನೆ. ನಿಪಿ 5 ರಲ್ಲಿರುವ ವಿಳಾಸದಲ್ಲಿ ಆರೋಪಿಯು ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ತನ್ನ ಅಂಗಡಿಯಲ್ಲಿ ಬೆಳಿಗ್ಗ 8.00 ಯಿಂದ ರಾತ್ರಿ 8.00 ಗಂಟೆವರೆಗೂ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ 3 ನೋಟೀಸ್ ವಾಪಸ್ಸಾದ ನಂತರ ಆರೋಪಿಯು ವಿಳಾಸದಲ್ಲಿ ಇರುವ ಬಗ್ಗ ನಾನು ವಿಚಾರಣೆ ಮಾಡಿರುವುದಿಲ್ಲ . ನಾನು ಆರೋಪಿಗೆ ಯಾವುದೇ ಹಣವನ್ನು ನೀಡಿರುವುದಿಲ್ಲ . ನನಗೆ 5 ಲಕ್ಷ ರೂಪಾಯಿ ಹಣ ನೀಡುವ ಸಾಮರ್ಥ್ಯ ಇರುವುದಿಲ್ಲ , ನಾನು ಆರೋಪಿಗೆ ಸಂಬಂದಿಸಿದ ನಿಪಿ **1** ಚೆಕ್ ಅನ್ನ ದುರುಪಯೋಗ ಪಡಿಸಿಕೊಂಡು ಈ ಪಿರ್ಯಾದನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ **1** ಚೆಕ್ ನಲ್ಲಿ ಇರುವ ಬರವಣಿಗೆ ಮತ್ತು ಸಹಿಯು ಆರೋಪಿಯದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು **,** ಮಂಜುನಾಥ **,** ಮಹಾಂತೇಶ್ ಮತ್ತು ಲೊಕೇಶ್ ಎಲ್ಲರೂ ಸೇರಿಕೊಂಡು ಒಬ್ಬರಿಗೊಬ್ಬರ ಪ್ರಕರಣಗಳಿಗೇ ಅನುಕೂಲವಾಗುವಂತೆ ಅಲ್ಪ ಸಮಯದಲ್ಲೇ ನಿಪಿ **1** ರಲ್ಲಿ ಆರೋಪಿಯ ಸಹಿಯನ್ನು ನಾವೇ ಸೃಷ್ಠಿ ನಗಧೀಕರಣಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾವು 4 ಜನ ಸಹ ಆರೋಪಿ ವಾಸ ಇಲ್ಲದ ಮನೆಯು ವಿಳಾಸವನ್ನು ನ್ಯಾಯಾಲಯಕ್ಕೆ ನೀಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ **1** ರಲ್ಲಿ ದಿನಾಂಕದ ಅಕ್ಷರಗಳು ಮತ್ತು **5** ಲಕ್ಷ ರೂಪಾಯಿ ಅಂಕೆಯ ಅಕ್ಷರಗಳು ಅರಳಿದ ರೀತಿಯಲ್ಲಿ ಕಾಣುತ್ತದೆ ಎಂದರೆ ನನಗೆ ಗೊತ್ತಿಲ್ಲ**.**

ನಿಪಿ **1** ರಲ್ಲಿ ಹೆಸರಿನ ಮೇಲೆ ಸಹಿ ಮಾಡಬೇಕಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ**.** ನಾನು ಸದರಿ ಸಹಿಯನ್ನು ಸೃಷ್ಠಿಮಾಡಿದ ಕಾರಣ ಹೆಸರಿನ ಕೆಳಗಡೆ ಅವಸರದಲ್ಲಿ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ **1** ಚೆಕ್ ಅನ್ನು ನಾನು ದಿಃ **14.02.2022** ರಂದು ನಗಧೀಕರಣಕ್ಕೆಸಲ್ಲಿಸಿರುತ್ತೇನೆ **.** ನನಗೆ ನಿಪಿ **1** ಚೆಚ್ ದಿಃ **15.02.2022** ಕ್ಕೆ ವಾಪಸ್ಸಾಗಿರುತ್ತದೆ **.** ನನಗೆ ಸಂಬಂದಿಸಿದ ಕೆನರಾ ಬ್ಯಾಂಕ್ ಖಾತೆಗೆ ನಿಪಿ **1** ಚೆಕ್ ಅನ್ನು ಸಲ್ಲಿಸಿರುತ್ತೇನೆ **.** ಆರೋಪಿಯ ಬ್ಯಾಂಕ್ ನವರು ನೀಡಿದ ಹಿಂಬರಹದ ಬಗ್ಗೆ ದಾಖಲೆಗಳನ್ನು ನಾನು ನೀಡಿರುವುದಿಲ್ಲ **.** ನನ್ನ ಆಧಾಯಕ್ಕೆ ಸಂಬಂದಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿ ವಿರುದ್ದ ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಇರುವುದಿಲ್ಲ.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು**.)**

ಓ ಹೇ ಕೇ ಸರಿ ಇದೆ

Sd/-

ಸಿವಿಲ್ ನ್ಯಾಯಾಧೀಶರು**,** ಜಗಳೂರು